ಶ್ರೀ ಪಾಟೂಳ್ ನಾಗರಾಜ್ : ಸಲಹೆ ಮಾಡುವುದಕ್ಕೆ ಸದನದ ಸಮಿತಿ ಮಾಡಿ. ಸಭೆಯನ್ನು ನಾಳೆ ಮುಕ್ತಾಯ ಮಾಡುತ್ತಿದ್ದೀರಿ. ಈ ಸಂದರ್ಭದಲ್ಲಿ ಸಲಹೆ ಕೊಡಿ ಎಂದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ : ತಾವು ಕುಳಿತುಕೊಂಡರೆ ಹೇಳುತ್ತೇನೆ. ಸಲಹೆ ಕೊಡಿ ಎಂದರೆ ಸದನದಲ್ಲೇ ಕೊಡಿ ಎಂದು ಅಲ್ಲ. ಪತ್ರದ ಮೂಲಕ ಹೇಳುವುದಕ್ಕೆ ಬರುತ್ತದೆ, ಬಾಯಿ ಮೂಲಕ ಹೇಳುವುದಕ್ಕೆ ಬರುತ್ತದೆ. ಅದು ಬಿಟ್ಟು ನಾನು ಬೇರೆ ಇನ್ನೇನು ಹೇಳಲಿ?

ಶ್ರೀ ಪಾಟೂಳ್ ನಾಗರಾಜ್ : ಮುಖ್ಯಮಂತ್ರಿಗಳು ನನಗೆ ಸಿಕ್ಕಿ ಎರಡು ತಿಂಗಳಾಯಿತು. ನಾನು ಹೇಗೆ ಹೇಳಲಿ?

ಅಧ್ಯಕ್ಷರು : ಪ್ರೆಸ್ ಸ್ಟೇಟ್‌ಮೆಂಟ್ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ : ಅವಮಾನ ಮತ್ತೊಂದು ಪ್ರಶ್ನೆ ಅಲ್ಲ. ನಾನು ನಮ್ಮ ಮಕ್ಕಳ ಹಿತದೃಷ್ಟಿಯಿಂದ ಈ ತೀರ್ಮಾನ ಮಾಡಿದ್ದೇನೆ. ಅವಮಾನ ಎಂಬ ವಿಚಾರ ಅಲ್ಲ. ಇಲ್ಲಿ ಯಾರು ಹೇಳಿಕೆ ಮಾತೂ ಇಲ್ಲ. ಅವರ ಬಗ್ಗೆ ನಮಗೆ ಗೌರವ ಇದೆ. ಸರ್ಕಾರದ ಬಗ್ಗೆ ಅವರ ಕಡೆಯಿಂದ ಗೌರವ ಇಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಒಬ್ಬರಿಗೊಬ್ಬರು ಗೌರವ ಕೊಟ್ಟುಕೊಂಡು ಹೋದರೆ ಒಳ್ಳೆಯದೆಂದು ಈ ವಿಚಾರದ ಬಗ್ಗೆ ಇಷ್ಟೇ ಹೇಳಿ ಇದಕ್ಕಿಂತ ಹೆಚ್ಚಿಗೆ ಏನೂ ಇಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗೆ ಉತ್ತರವನ್ನು ನೀಡಿದ್ದೇವೆ, ಲೋಕಸೇವಾ ಆಯೋಗದಿಂದ ಮುಖ್ಯೋಪಾಧ್ಯಾಯರ ನೇಮಕಾತಿ ಬಗ್ಗೆ ಇರತಕ್ಕ ಅಧಿಕಾರವನ್ನು ಪಾಪಸ್ಸು ಪಡೆದಿದ್ದಾರೆ ಅದು ಸರಿಯಲ್ಲ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ಒತ್ತಾಯಿಸುವುದು ಏನೆಂದರೆ, ಈಗೇನು ಸಂದರ್ಶನ ನಡೆಯುತ್ತಿದೆ ಅದನ್ನು ಹಾಗೆಯೇ ಮುಂದುವರಿಸಿ ಅಯ್ಕೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಒಂದು ವೇಳೆ ನೀವು ನಿಜವಾಗಿ ಭ್ರಷ್ಟಾಚಾರ ನಡೆಯುತ್ತಿದ್ದ ಅದನ್ನು ಸರಿಪಡಿಸಿಬೇಕೆಂದು ಹೇಳುವುದಾದರೆ, ಮೆರಿಟ್ ಆಧಾರದ ಮೇಲೆ ರೋಸ್ಟರ್ ಸಿಸ್ಟಂ ಅನುಸರಿಸಿ ನೇಮಕಾತಿ ಮಾಡುವ ಹೊಸ ವ್ಯವಸ್ಥೆಯನ್ನು ಮಾಡಿದ್ದೇವೆಂದು ಘೋಷಣೆ ಮಾಡಬೇಕು. ಇಲ್ಲದಿದ್ದರೆ ತಾವು ಮಾಡಿರತಕ್ಕದ್ದು ರಾಜಕೀಯ ಷಡ್ಯಂತರ, ರಾಜಕೀಯಕ್ಕೋಸ್ಕರ ಕೆಲಸ ಮಾಡುತ್ತಿದ್ದೀರೆಂದು ಆರೋಪ ಮಾಡಬೇಕಾಗುತ್ತದೆ. ತಮ್ಮ ಬಂಧುಬಳಗದವರಿಗೆ ಹುದ್ದೆ ಕೊಡಬೇಕೆಂದು ಈ ರೀತಿ ಮಾಡುತ್ತಿದ್ದಾರೆಂದು ಆರೋಪಿಸಿ ಸರ್ಕಾರದ ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿಜೆಪಿಯ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಈಗ ಸಭೆ ಮುಂದುವರಿದು ಪುನಃ ಮಧ್ಯಾಹ್ನ 2.30ಕ್ಕೆ ಸೇರುತ್ತದೆ.

(ಸಭೆಯು ಪುನಃ ಮಧ್ಯಾಹ್ನ 3.00ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷೆಣಿ ಅವರು ಪೀಠವನ್ನಲಂಕರಿಸಿದ್ದರು)

* * *

ಶ್ರೀ ಸಿ. ಬೈರೇಗೌಡ : ಆಗಲೇ ಕುತೆಗಲ್ ವಿಚಾರ.....

ಉಪಾಧ್ಯಕ್ಷೆಣಿಯವರು : ಮುಖ್ಯಮಂತ್ರಿಗಳು ಬರಲಿ ಈಗ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುವುದು

ವಿಷಯ : ಕಂಪ್ಯೂಟರ್ ಕೊಂಡುಕೊಳ್ಳುವುದರಲ್ಲಿ ಅವ್ಯವಹಾರ

ಶ್ರೀ ಬಿ.ಎಸ್. ಯಡಿಯೂರಪ್ಪ : (ಶಿಕಾರಿಪುರ) ಕಂಪ್ಯೂಟರ್ ಅವ್ಯವಹಾರದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ; ಮತ್ತು ಮಧ್ಯಾಹ್ನದ ಮೇಲೆ ಆ ವಿಚಾರವನ್ನು ತೆಗೆದುಕೊಳ್ಳುವುದರ ಬಗ್ಗೆಯೂ ಅರಿಕೆ ಮಾಡಿದ್ದೆ. ವಿಧಾನ ಪರಿಷತ್ತಿನಲ್ಲಿ ಈಗಾಗಲೇ ಈ ವಿಷಯ ಪ್ರಸ್ತಾಪವಾಗಿದೆ. ಕರ್ತವ್ಯ ದೃಷ್ಟಿಯಿಂದ ಇಲ್ಲಿಯೂ ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಸುಮಾರು 5 ಕೋಟಿ 27 ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟ ವ್ಯವಹಾರ ಅದು. ಆಗತ್ಯವಿಲ್ಲದ ಕಂಪ್ಯೂಟರ್‌ಗೆ ಆರ್ಡರ್ ಕೊಟ್ಟು 3 ಕೋಟಿ ರೂಪಾಯಿ ದುರುಪಯೋಗವಾಗಿದೆ. ಆರ್ಡರ್ ಕೊಟ್ಟ ದಿವಸವೇ ಅಡ್ವಾನ್ಸ್ ಕೊಟ್ಟಿದ್ದಾರೆ.